<u>**ಕರ್ನಾಟಕ ವಿಧಾನ ಪರಿಷತ್ತು**</u>

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು	**:**	**ಶ್ರೀ ಯು.ಬಿ. ವೆಂಕಟೇಶ್** **(~~ನಾಮನಿರ್ದೇಶನ ಹೊಂದಿದವರು~~)**
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**:**	**05**
ಉತ್ತರಿಸಬೇಕಾದ ದಿನಾಂಕ	**:**	**15.02.2022**
ಉತ್ತರಿಸಬೇಕಾದ ಸಚಿವರು	**:**	**ಸಹಕಾರ ಸಚಿವರು**

ಕ್ರ. ಸಂ.	**ಪ್ರಶ್ನೆ**	**ಉತ್ತರ**
ಅ)	ಭಾರತ ಸಂವಿಧಾನದ 97ನೇ ತಿದ್ದುಪಡಿಯನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯ ರದ್ದುಪಡಿಸಿರುವ ಕಾರಣ ಸಹಕಾರ ಸಂಘಗಳ ಅಧಿನಿಯಮ ತಿದ್ದುಪಡಿಗೆ ಸರ್ಕಾರ ಕೈಗೊಂಡ ಕ್ರಮವೇನು;	ಈ ಬಗ್ಗೆ ಸಾಧಕ ಬಾಧಕಗಳ ಬಗ್ಗೆ ಪರಿಶೀಲಿಸಿ ಮುಂದಿನ ಕ್ರಮವಿಡಲಾಗುವುದು.
ಆ)	ಕ್ರಮ ಕೈಗೊಳ್ಳದಿದ್ದಲ್ಲಿ ಕಾರಣವೇನು; ತಿದ್ದುಪಡಿಯನ್ನು ಯಾವಾಗ ತರಲಾಗುತ್ತದೆ	
ಇ)	ಸಹಕಾರ ಸಂಘಗಳು / ಬ್ಯಾಂಕುಗಳ ವಾರ್ಷಿಕ ಶಾಸನಾತ್ಮಕ ಲೆಕ್ಕಪರಿಶೋಧನೆಯನ್ನು ಸರ್ಕಾರಿ ಲೆಕ್ಕಪರಿಶೋಧಕರಿಂದ ಮಾಡಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ;	ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 63(1) ಹಾಗೂ 63(2) ರಂತೆ ಸಹಕಾರ ಸಂಘಗಳು ತಮ್ಮ ಸಂಸ್ಥೆಯ ವಾರ್ಷಿಕ ಶಾಸನಬದ್ಧ ಲೆಕ್ಕಪರಿಶೋಧನೆಗೆ ಲೆಕ್ಕಪರಿಶೋಧಕರನ್ನು ನೇಮಿಸಿಕೊಳ್ಳಬಹುದಾಗಿದೆ. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 63(1) ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 29ರಂತೆ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ಸನ್ನದು ಲೆಕ್ಕಪರಿಶೋಧಕರು/ಸನ್ನದು ಲೆಕ್ಕಪರಿಶೋಧಕರ ಫರ್ಮ್/ಕಾಸ್ಟ್ ಅಕೌಂಟೆಂಟ್ / ಕಾಸ್ಟ್ ಅಕೌಂಟೆಂಟ್ ಫರ್ಮ್ ಹಾಗೂ ಇಲಾಖಾ ಲೆಕ್ಕಪರಿಶೋಧಕರ ಯಾದಿಯನ್ನು ಸಿದ್ಧಪಡಿಸಬೇಕಿರುತ್ತದೆ. ಸದರಿ ಪಟ್ಟಿಯಲ್ಲಿ ಲಭ್ಯವಿರುವ ಲೆಕ್ಕಪರಿಶೋಧಕರನ್ನು ಸಹಕಾರ ಸಂಘಗಳು ಆಯ್ಕೆ ಮಾಡಿಕೊಂಡು ತಮ್ಮ ವಾರ್ಷಿಕ ಶಾಸನಬದ್ಧ ಲೆಕ್ಕಪರಿಶೋಧನೆಯನ್ನು ನಿರ್ವಹಿಸಿಕೊಳ್ಳಬೇಕಿರುತ್ತದೆ. ಸಹಕಾರ ಸಂಘಗಳು ಇಲಾಖಾ ಲೆಕ್ಕಪರಿಶೋಧಕರನ್ನು ಸಾಮಾನ್ಯ ಸಭೆಯಲ್ಲಿ ನೇಮಕ ಮಾಡಿಕೊಂಡಲ್ಲಿ ಅಂತಹ ಸಹಕಾರ ಸಂಘಗಳ ಲೆಕ್ಕಪರಿಶೋಧನೆಯನ್ನು ಇಲಾಖಾ ಲೆಕ್ಕಪರಿಶೋಧಕರಿಂದ ನಿರ್ವಹಿಸಲಾಗುತ್ತಿದೆ.
ಈ)	ಇಲ್ಲದಿದ್ದಲ್ಲಿ ಈ ಬಗ್ಗೆ ಸರ್ಕಾರದ ನಿಲುವೇನು;	ಸರ್ಕಾರಿ ಲೆಕ್ಕಪರಿಶೋಧಕರಿಗೆ ಸಹಕಾರ ಸಂಘಗಳ ಶಾಸನಾತ್ಮಕ ಲೆಕ್ಕಪರಿಶೋಧನೆಗೆ ಅವಕಾಶ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.
ಉ)	ಸರ್ಕಾರಿ ಲೆಕ್ಕಪರಿಶೋಧಕರಿಂದ ಲೆಕ್ಕಪರಿಶೋಧನೆ ಮಾಡಿಸಲು ಸರ್ಕಾರಕ್ಕಿರುವ ತೊಡಕುಗಳೇನು?	ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ಕ್ಕೆ 2013ರಲ್ಲಿ ಸಮಗ್ರ ತಿದ್ದುಪಡಿಯಾಗಿದ್ದು, ಅದರಲ್ಲಿನ ಅವಕಾಶದಂತೆ ಸಹಕಾರ ಸಂಘಗಳ ಲೆಕ್ಕಪರಿಶೋಧನೆಯನ್ನು ಸನ್ನದು ಲೆಕ್ಕಪರಿಶೋಧಕರು / ಸನ್ನದು ಲೆಕ್ಕಪರಿಶೋಧಕರ ಫರ್ಮ್ / ಕಾಸ್ಟ್ ಅಕೌಂಟೆಂಟ್ / ಕಾಸ್ಟ್ ಅಕೌಂಟೆಂಟ್ ಫರ್ಮ್ ಹಾಗೂ ಇಲಾಖಾ ಲೆಕ್ಕಪರಿಶೋಧಕರು ನಿರ್ವಹಿಸುತ್ತಿರುತ್ತಾರೆ. ಪ್ರಸ್ತುತ ಕಾಯ್ದೆಯಲ್ಲಿನ ಅವಕಾಶ ಹಿನ್ನಲೆಯಲ್ಲಿ ಲೆಕ್ಕಪರಿಶೋಧನೆಯನ್ನು ಸಂಪೂರ್ಣವಾಗಿ ಸರ್ಕಾರಿ ಲೆಕ್ಕಪರಿಶೋಧಕರಿಂದ ಮಾಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಸಿಒ 14 ಸಿಎಲ್‌ಎಮ್ 2022 (ಇ)

ಎಸ್.ಟಿ. ಸೋಮಶೇಖರ್

(ಎಸ್. ಟಿ. ಸೋಮಶೇಖರ್)
ಸಹಕಾರ ಸಚಿವರು